ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಸಂಖ್ಯೆ: ರೇರಾ/ಕಂದಾಯ/ 3645/2020-21 / 1170 ದಿನಾಂಕ: 07.08.2021
ಲಗತ್ತು: ಅಡಕಗಳು ___ ಪುಟಗಳು

ಇವರಿಗೆ

ಜಿಲ್ಲಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ
ಕಂದಾಯ ಭವನ, ಕೆ.ಜಿ.ರಸ್ತೆ,
ಬೆಂಗಳೂರು – 560009.

ಮಾನ್ಯರೆ,

ವಿಷಯ: ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016ರ ಕಲಂ 40(1) ಅಡಿ ದಂಡ/ ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವ ಬಗ್ಗೆ.

ಉಲ್ಲೇಖ:1. ನ್ಯಾಯ ನಿರ್ಣಯಾಧಿಕಾರಿಯವರ ಪ್ರಕರಣ ಸಂಖ್ಯೆ: ಸಿಎಂಪಿ/ 190724/00003645 ದಿನಾಂಕ: 17.03.2020 ರಲ್ಲಿನ ತೀರ್ಪು

2. ನ್ಯಾಯ ನಿರ್ಣಯಾಧಿಕಾರಿಯವರ ತೀರ್ಪನ್ನು ಕಾರ್ಯಗತಗೊಳಿಸಿದ ಆದೇಶ ದಿನಾಂಕ: 15.07.2021

*****

ಭಾರತ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಅನ್ನು ಜಾರಿಗೆ ತಂದಿರುತ್ತದೆ. ಅದಕ್ಕನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 2017 ಅನ್ನು ಪ್ರಕಟಿಸಲಾಗಿದೆ. ಇವುಗಳಲ್ಲಿ ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ:

Real Estate (Regulation and Development) Act, 2016

Section 40(1):- If a promoter or an allottee or a real estate agent, as the case may be, fails to pay any interest or penalty or compensation imposed on him, by the adjudicating officer or the Regulatory Authority or the Appellate Authority, as the case may be, under this Act or the rules and regulations made there under, it shall be recoverable from such promoter or allottee or real estate agent, in such manner as may be prescribed as an arrears of land revenue.

09 AUG 2021
DEPUTY COMMISSIONER OFFICE
BANGALORE DISTRICT BANGALORE

Karnataka Real Estate (Regulation and Development) Rules, 2017

Rule 25: Manner of recovery of interest, penalty and compensation: - Subject to the provisions of sub-section (1) of Section 40, the recovery of the amounts due as arrears of land revenue shall be carried out in the manner provided in the Karnataka Land Revenue Act, 1964 and the rules made there under.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಕೆಳಕಂಡ ದಾಖಲಾತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ:

(1) ಉಲ್ಲೇಖ(1)ರ ಮಾನ್ಯ ನ್ಯಾಯನಿರ್ಣಯಾಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ಮುಂದೆ ದಾಖಲಾಗಿರುವ ಪ್ರಕರಣ ಸಂಖ್ಯೆ: ಸಿಎಂಪಿ/ 190724/00003645 ದಿನಾಂಕ: 17.03.2020 ರಲ್ಲಿ ನೀಡಿರುವ ತೀರ್ಪು.

(2) ಉಲ್ಲೇಖ–2ರ ಮಾನ್ಯ ನ್ಯಾಯನಿರ್ಣಯಾಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ತೀರ್ಪನ್ನು ಕಾರ್ಯಗತಗೊಳಿಸಿದ ಆದೇಶ ದಿ: 15.7.2021

(3) ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಬೇಕಾಗಿರುವ ಮೊತ್ತಕ್ಕೆ ವಸೂಲಾತಿ ದೃಢೀಕರಣ ಪತ್ರ.

ಮೇಲ್ಕಂಡ ಪ್ರಕರಣದಲ್ಲಿ ಉಲ್ಲೇಖ–2ರ ಮಾನ್ಯ ನ್ಯಾಯನಿರ್ಣಯಾಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್

ನಿಯಂತ್ರಣ ಪ್ರಾಧಿಕಾರ ಇವರ ತೀರ್ಪಿನ್ನು ಕಾರ್ಯಗತಗೊಳಿಸಿದ ಆದೇಶ ದಿನಾಂಕ: 15.7.2021ರಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ORDER

By acting under section 40 of the RERA Act, read with Rule 25, the amount payable of Rs. 60,61,602/- which is treated as arrears of land revenue from the developer " M/s. Nitesh Housing Developers Pvt.Ltd.," and the same has to be recovered by sending the file to Deputy Commissioner for recovery as arrears of land revenue. The same amount shall be deposited in the office account.

The above amount has been calculated up to 05.01.2021

Office is hereby directed to mention in the recovery warrant.

a) As to the recovery of future interest on the amount of Rs. 40,53,685/- @ 9.30 % p.a. simple interest whenever it falls due from 06.01.2021 to till realization.

ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಮಾನ್ಯ ನ್ಯಾಯನಿರ್ಣಯಾಧಿಕಾರಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರ ತೀರ್ಪನ್ನು ಕಾರ್ಯಗತಗೊಳಿಸಿದ ಆದೇಶದಂತೆ "M/s. Nitesh Housing Developers Pvt.Ltd.,, " ರವರಿಂದ ಭೂ ಕಂದಾಯ ಬಾಕಿ ವಸೂಲು ಮಾಡಿ, ಅರ್ಜಿದಾರರಾದ Lynette Hyacinth Nazareth & Norbert Rajan Nazareth ರವರಿಗೆ ನೀಡುವ ಸಲುವಾಗಿ ಈ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಜಮಾ ಮಾಡಲು ಕೋರಲಾಗಿದೆ ಹಾಗೂ ಈ ಪತ್ರವನ್ನು RERA Web Portal (www.rera.karnataka.gov.in) ನಲ್ಲಿ ಅಪ್ ಲೋಡ್ ಮಾಡಲಾಗಿದೆ ಎಂಬ ಅಂಶವನ್ನು ಸಹ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಖಜಾನೆ-2 ರಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ "8242-00-120-0-18-671 ಲೆಕ್ಕ ಶೀರ್ಷಿಕೆ ಖಾತೆ ಸಂಖ್ಯೆ: 26572ಎ158" ರ ಖಾತೆಗೆ ಜಮಾ ಮಾಡುವುದು. ಡಿಡಿಓ ಕೋಡ್ 99807 O

ಅಥವಾ

ಸದರಿ ಎದರುದಾರರು ಪಾವತಿಸಲು ವಿಫಲರಾದಲ್ಲಿ ಅವರ ಎಲ್ಲಾ ಚರ – ಸ್ಥಿರಾಸ್ತಿಗಳನ್ನು ಪತ್ತೆಹಚ್ಚಿ ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲ್ಲಾ ಕ್ರಮಗಳನ್ನು ಅನುಸರಿಸಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಿಯಮಾನುಸಾರ ಹರಾಜು ಪ್ರಕ್ರಿಯೆ ಕೈಗೊಂಡು ದಂಡದ ಮೊತ್ತವನ್ನು ವಸೂಲಿ ಮಾಡಿ ರೇರಾ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ಮೇಲ್ಕಂಡಂತೆ ಆದಷ್ಟು ಬೇಗ ಕ್ರಮ ವಹಿಸಿ ವರದಿ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.
(ಕಾರ್ಯದರ್ಶಿಗಳಿಂದ ಅನುಮೋದಿಸಲ್ಪಟ್ಟಿದೆ).

ತಮ್ಮ ವಿಶ್ವಾಸಿ,

B.R. Madhusudan

ಅಧೀನ ಕಾರ್ಯದರ್ಶಿ(ಪ್ರ)
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಪ್ರತಿಗಳು:-

1) M/s. Nitesh Housing Developers Pvt.Ltd., Level 7, Nitesh Timesquare, No.8, MG Road, Bengaluru 560001 /4297

2) Lynette Hyacinth Nazareth & Norbert Rajan Nazareth, No. 305, Royal Heritage, Old Madras Road, Benniganahalli, K.R. Puram, Bengaluru -560016 /4298

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಸಂಖ್ಯೆ: ರೇರಾ/ಕಂದಾಯ/3645/2020-21 ದಿನಾಂಕ: 07.08.2021

ನ್ಯಾಯ ನಿರ್ಣಯಾಧಿಕಾರಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಇವರ ಮುಂದೆ ದಾಖಲಾಗಿರುವ ಫಿರ್ಯಾದು ಸಂಖ್ಯೆ: ಸಿಎಂಪಿ/ 190724/00003645 ದಿನಾಂಕ: 17.03.2020 ರ ಆದೇಶದಂತೆ:

ಬಾಕಿ ವಸೂಲಾತಿ ಪ್ರಮಾಣ ಪತ್ರ

ಫಿರ್ಯಾದುದಾರರು		ಪ್ರತಿವಾದಿಗಳು
Lynette Hyacinth Nazareth & Norbert Rajan Nazareth, No. 305, Royal Heritage, Old Madras Road, Benniganahalli, KR Puram, Bengaluru -560016	ವಿರುದ್ಧ	M/s. Nitesh Housing Developers Pvt.Ltd., Level 7, Nitesh Timesquare, No.8, MG Road, Bengaluru 560001

ಮೇಲ್ಕಂಡ ಪ್ರಕರಣದಲ್ಲಿ ಪ್ರತಿವಾದಿಯಿಂದ ಫಿರ್ಯಾದುದಾರರಿಗೆ ಪಾವತಿಸಬೇಕಾಗಿರುವ ರೂ. 60,61,602/- (ರೂಪಾಯಿ ಅರವತ್ತು ಲಕ್ಷದ ಅರವತ್ತೊಂದು ಸಾವಿರದ ಆರು ನೂರ ಎರಡು ಮಾತ್ರ) ಗಳನ್ನು ದಿನಾಂಕ 05.01.2021 ರವರೆಗೆ ಲೆಕ್ಕಾಚಾರ ಮಾಡಿದ್ದು, ಸದರಿ ಮೊತ್ತದ ಜೊತೆಗೆ ಹಣ ಪಾವತಿ ಮಾಡುವವರೆಗೆ ದಿನಾಂಕ: 06.01.2021 ರಿಂದ ರೂ. 40,53,685/- ಗಳಿಗೆ ವಾರ್ಷಿಕ ಸರಳ ಬಡ್ಡಿ ಶೇಕಡ 9.30 ರಂತೆ ಲೆಕ್ಕಾಚಾರ ಮಾಡಿ ಭೂಕಂದಾಯ ಬಾಕಿ ಎಂದು ಪ್ರತಿವಾದಿಯಿಂದ ವಸೂಲು ಮಾಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ (ಆದೇಶದ ಪ್ರತಿ ಲಗತ್ತಿಸಿದೆ)

ಸದರಿ ಮೊತ್ತವನ್ನು ಈ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಜಮಾ ಮಾಡುವಂತೆ ಕೋರಿದೆ.

(1) ಖಜಾನೆ-2 ರಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ "8242-00-120-0-18-671 ಲೆಕ್ಕ ಶೀರ್ಷಿಕೆ ಖಾತೆ ಸಂಖ್ಯೆ: 26572ಎ158" ರ ಖಾತೆಗೆ ಜಮಾ ಮಾಡುವುದು. ಡಿಡಿಓ ಕೋಡ್ 99807O

ಅಥವಾ

(2) ಸದರಿ ಎದರುದಾರರ ಇತರೆ ಎಲ್ಲಾ ಚರ - ಸ್ಥಿರಾಸ್ತಿಗಳನ್ನು ಪತ್ತೆಹಚ್ಚಿ ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಎಲಾ ್ಲಕಾರ್ಯವಿಧಾನ ಅನುಸರಿಸಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಿಯಮಾನುಸಾರ ಹರಾಜು ಪ್ರಕ್ರಿಯೆ ಕೈಗೊಂಡು ದಂಡದ ಮೊತ್ತವನ್ನು ವಸೂಲಿ ಮಾಡಿ ರೇರಾ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

B.R. Madhusudhan

ಅಧೀನ ಕಾರ್ಯದರ್ಶಿ(ಪ್ರ)
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್,
3ನೇ ಕ್ರಾಸ್, ಮಿಷನ್‌ರಸ್ತೆ, ಬೆಂಗಳೂರು-560027

ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇವರು ಜಿಲ್ಲಾಧಿಕಾರಿ, ಬೆಂಗಳೂರು ಜಿಲ್ಲೆ, ಇವರಿಗೆ ಭೂ ಕಂದಾಯ ಬಾಕಿಯಂತೆ ವಸೂಲಾತಿ ಮಾಡಲು ಕಳುಹಿಸಿರುವ ವಸೂಲಾತಿ ಪ್ರಕರಣದತಪಶೀಲು ಪಟ್ಟಿ

(ಚೆಕ್ ಲಿಸ್ಟ್)

ಸಂಖ್ಯೆ: ರೇರಾ/ಕಂದಾಯ/3645/2020-21 ದಿನಾಂಕ: 07.08.2021

1	ಪ್ರಸ್ತುತ ಪ್ರಕರಣದಲ್ಲಿ ಪ್ರಸ್ತಾಪಿಸಿರುವ ಮೊಬಲಗನ್ನು ವಸೂಲಾತಿ ಮಾಡಲು ಇಲಾಖೆಯ ವತಿಯಿಂದ ಕಾನೂನು ರೀತ್ಯ ಎಲ್ಲಾ ವಿಧಿವಿಧಾನಗಳನ್ನು ಅನುಸರಿಸಲಾಗಿದೆಯೇ?	ಅನುಸರಿಸಲಾಗಿದೆ
2	ಪ್ರತಿಯೊಂದು ಬಾಕಿದಾರರ ಸಂಸ್ಥೆಯ ಪ್ರಕರಣಕ್ಕೂ ಮುಖಪತ್ರ (ಕವರಿಂಗ್ ಲೆಟರ್) ಹಾಕಲಾಗಿದೆಯೇ?	ಹೌದು
3	ವಸೂಲಾತಿ ಪತ್ರ ತ್ರಿಪ್ರತಿಯಲ್ಲಿ ಕಳುಹಿಸಲಾಗಿದೆಯೇ?	ಇಲ್ಲ
4	ವಸೂಲಾತಿ ಪತ್ರಕ್ಕೆ ಸಮರ್ಥ/ ಸಕ್ಷಮ ಪ್ರಾಧಿಕಾರದ ಅಧಿಕಾರಿಯಿಂದ ದೃಢೀಕರಿಸಲಾಗಿದೆಯೇ?	ದೃಢೀಕರಿಸಿದೆ
5	ಪ್ರಸ್ತುತ ಪ್ರಕರಣದ ವಸೂಲಿ ಕ್ರಮಕ್ಕೆ ಸಂಬಂಧಿಸಿದಂತೆ ಬೇರೆ ಯಾವುದಾದರೂ ಕಡೆ ನ್ಯಾಯಾಲಯದಲ್ಲಿ ಪ್ಯಾರಲಲ್ ಪ್ರೊಸೀಡಿಂಗ್ಸ್ ನಡೆಯುತ್ತಿದೆಯೇ ಅಥವಾ ಈ ಹಿಂದೆ ನಡೆದಿದ್ದ ಪಕ್ಷದಲ್ಲಿ ನ್ಯಾಯಾಲಯದ ತೀರ್ಪಿನ ಪ್ರತಿ ಲಗತ್ತಿಸುವುದು.	ಇಲ್ಲ
6	ವಸೂಲಾತಿ ಪತ್ರದಲ್ಲಿ ಬಾಕಿದಾರರ ಸಂಸ್ಥೆಯ ಪೂರ್ಣ ವಿಳಾಸವನ್ನು ನಮೂದಿಸಲಾಗಿದೆಯೇ?	ನಮೂದಿಸಿದೆ
7	ಬಾಕಿದಾರಿನಿಂದ ಇಲಾಖೆಗೆ ಬರಬೇಕಾಗಿರುವ ಬಾಕಿಯು ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು?	2021
8	ಪ್ರಸ್ತುತ ಪ್ರಕರಣದಲ್ಲಿ ನಮೂದಿಸಿರುವ ಸಂಸ್ಥೆ/ಬಾಕಿದಾರರು ಹಾಲಿ ಅಸ್ಥಿತ್ವದಲ್ಲಿದೆಯೇ? ಹಾಗೂ ಸ್ಥಳದಲ್ಲಿ ವಾಸವಾಗಿದ್ದಾರೆಯೇ? ಕ್ರಮವಾಗಿ	ಅಸ್ತಿತ್ವದಲ್ಲಿದೆ
9	ಕಂದಾಯ ಇಲಾಖೆಯಲ್ಲಿ ವಸೂಲಿ ಕ್ರಮ ಜರುಗಿಸುವ ಪ್ರಕರಣಗಳಲ್ಲಿ ವಸೂಲಿ ವೆಚ್ಚವನ್ನು (ಅಂದರೆ ಹರಾಜು ಸಮಯದಲ್ಲಿ) ನಿಮ್ಮ ಇಲಾಖೆಯಿಂದ ಭರಿಸಲಾಗಿದೆಯೇ?	ಇಲ್ಲ
10	ವಸೂಲಿ ಮಾಡಿದ ಮೊಬಲಗನ್ನು ನಿಮ್ಮ ಇಲಾಖೆಗೆ ಡಿ.ಡಿ ಮೂಲಕ ಕಳುಹಿಸಿದಲ್ಲಿ ಡಿ.ಡಿ ಕಮಿಷನ್ ಹಣವನ್ನು ವಸೂಲಿ ಮಾಡಿದ ಹಣದಲ್ಲಿಯೇ ಭರಿಸಬೇಕೋ ಅಥವಾ ಬಾಕಿದಾರರಿಂದ ಭರಿಸಬೇಕೋ?	ಬಾಕಿದಾರರಿಂದ ಪಡೆದು ಭರಿಸಬೇಕು
11	ವಸೂಲಿ ಮಾಡಿದ ಮೊಬಲಗನ್ನು ಸರ್ಕಾರದ ಖಜಾನೆಗೆ *ಜಮಾ ಮಾಡಿಸುವ ಅವಕಾಶವಿದ್ದರೆ* ಹೆಡ್ ಆಫ್ ಅಕೌಂಟನ್ನು ನಮೂದಿಸಲಾಗಿದೆಯೇ?	ಲೆಕ್ಕ ಶೀರ್ಷಿಕೆ ಹಾಗೂ ಖಾತೆ ಸಂಖ್ಯೆ ನಮೂದಿಸಲಾಗಿದೆ
12	ಒಂದು ವೇಳೆ ಕಾರ್ಯಾಲಯದಿಂದ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ಗೆ ವಸೂಲಿಗೆ ಕಳುಹಿಸಿದ ಪ್ರಕರಣಗಳಲ್ಲಿ ಆ ದಿನಾಂಕದಿಂದ ಹಿಡಿದು ಎರಡು ತಿಂಗಳೊಳಗೆ ತಹಶೀಲ್ದಾರ್ ರವರಿಗೆ ಸಹಕಾರ ನೀಡಿ ಸಂಪೂರ್ಣ ವಸೂಲಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತದೆಯೇ?	ಯಾವುದೇ ಮಾಹಿತಿ ಕೋರಿದಲ್ಲಿ ಸಹಕರಿಸಲಾಗುವುದು.
13	ಪ್ರಸ್ತುತ ಪ್ರಕರಣದಲ್ಲಿ ತಾವು ತಿಳಿಸಿರುವ ಒಟ್ಟು ಮೊಬಲಗನ್ನು ಮಾತ್ರ ವಸೂಲು ಮಾಡಬೇಕೆ? ಅಥವಾ ಬಡ್ಡಿ ಸೇರಿಸಿ ವಸೂಲು ಮಾಡಬೇಕೆ? ಬಡ್ಡಿಯದರ ಹಾಗೂ ಯಾವ ದಿನಾಂಕದಿಂದ ಲೆಕ್ಕ ಹಾಕಬೇಕೆಂಬುದರ ವಿವರ ನೀಡಿ	ಒಟ್ಟು ಬಾಕಿ ಮೊತ್ತ ರೂ. 60,61,602/- ಗಳನ್ನು ದಿ: 05.01.2021 ರವರೆಗೆ ಲೆಕ್ಕಾಚಾರ ಮಾಡಿದ್ದು, ಸದರಿ ಹಣವನ್ನು ಸಂಪೂರ್ಣವಾಗಿ ಪಾವತಿ ಮಾಡುವ ವರೆಗೆ ದಿ:06.01.2021 ರಿಂದ ರೂ. 40,53,685/- ಗಳಿಗೆ ವಾರ್ಷಿಕ 9.30% ರಂತೆ ಸರಳ ಬಡ್ಡಿ ಲೆಕ್ಕಾಚಾರ ಮಾಡಿ ವಸೂಲಿ ಮಾಡುವುದು.

B. R. Madhusudhan.

ಅಧೀನ ಕಾರ್ಯದರ್ಶಿ(ಪ್ರ)
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ